# ಸಾವಿನ ಅದೃಶ್ಯಹಸ್ತದ ಕಣ್ಣಾಮುಚ್ಚಾಲೆ ಬಲ್ಲವರಾರು?

‘ನಾನು ಚೀನಾದಿಂದ ಪತಿಯೊಂದಿಗೆ ನಾಲ್ಕು ವರ್ಷಗಳ ಹಿಂದೆ ಬಂದಿದ್ದೆ. ನನ್ನ ಪತಿ ಚೀನಾಕ್ಕೆ ಮರಳಿ ಹೋದರು. ಆದರೆ ನಾನು ಹೋಗಲಿಲ್ಲ. ಇಲ್ಲಿ ಮಹಿಳೆಯರಿಗೆ ಒಳ್ಳೆಯ ವಾತಾವರಣವಿದೆ. ಇಲ್ಲಿ ಪ್ರತಿಯೊಬ್ಬರು ಸುಖವಾಗಿರಬಹುದು. ಇಲ್ಲಿ ಯಾರೂ ತನ್ನನ್ನು ಚಿಕ್ಕವನೆಂದು ಮನಗಾಣಲಾರರು. ಅಧಿಕಾರಿಗಳು ಮತ್ತು ಅವರ ಕೆಳಗೆ ಕೆಲಸ ಮಾಡುವವರು ಎಲ್ಲರೂ ಒಂದೇ ಎಂಬ ಭಾವನೆಯಿದೆ. ನನಗೆ ಹದಿನೈದು ವರ್ಷದ ಮಗನಿದ್ದಾನೆ. ಇಲ್ಲಿ ಅವನ ವಿದ್ಯಾಭ್ಯಾಸ ಮತ್ತು ಜೀವನಕ್ಕೂ ಉತ್ತಮ ವಾತಾವರಣವಿದೆ. ನಾನು ಅಲ್ಪ ಸ್ವಲ್ಪ ಡೇನಿಶ್ ಭಾಷೆಯನ್ನು ಕಲಿತು, ಒಂದು ಕಚೇರಿಯ ಕ್ಯಾಂಟೀನಿನಲ್ಲಿ ಕೆಲಸ ಮಾಡುತ್ತಿದ್ದೆ. ಆದರೆ ನಾನು ಮೊದಲು ಉತ್ತಮವಾಗಿ ಡೇನಿಶ್ ಭಾಷೆಯನ್ನು ಕಲಿಯಲೆಂದು ಕಳೆದ ವಾರ ನನ್ನನ್ನು ನೌಕರಿಯಿಂದ ತೆಗೆದು ಹಾಕಲಾಯಿತು. ಈಗ ಕೆಲವರ ಮನೆಯಲ್ಲಿ ಸಣ್ಣ ಪುಟ್ಟ ಕೆಲಸ ಮಾಡಿ ಅಲ್ಪಸ್ವಲ್ಪ ಸಂಪಾದನೆ ಮಾಡುತ್ತಿದ್ದೇನೆ. ತುಂಬಾ ನೊಂದಿದ್ದೇನೆ. ಈಗೇನು ಮಾಡಲಿ? ಬೇರೆ ನೌಕರಿಯನ್ನು ಎಲ್ಲಿ ಹುಡುಕಲಿ? ನನ್ನ ಮಗನ ಹುಟ್ಟುಹಬ್ಬ ಬರ್ತಿದೆ. ನಾನು ಅವನಿಗೆ ಐಪ್ಯಾಡ್ ಖರೀದಿಸುವುದಾಗಿ ಮಾತು ಕೊಟ್ಟಿದ್ದೆ. ಈಗ ಅದನ್ನು ಹೇಗೆ ಖರೀದಿಸಲಿ?’



ನಾನು ನನ್ನ ಜೇಬಿನಿಂದ ಇನ್ನೂರು ಕ್ರೋನರ್ ನೋಟನ್ನು ಹೊರತೆಗೆದು ಅವಳಿಗೆ ಕೊಡುತ್ತಾ ಹೇಳಿದೆ, ‘ಈ ಹಣ ತುಂಬಾ ಕಡಿಮೆ. ಒಂದು ವೇಳೆ ಇದು ನಿಮ್ಮ ಯಾವುದಾದರು ಉಪಯೋಗಕ್ಕೆ ಬಂದರೆ, ನಾನು ಧನ್ಯನಾದನೆಂದು ತಿಳಿಯುತ್ತೇನೆ.’

ಮಹಿಳೆ ಸ್ವಾಭಿಮಾನಿಯಾಗಿದ್ದಳು. ಅವಳು ನೋಟನ್ನು ತೆಗೆದುಕೊಳ್ಳಲು ಮುಂದಕ್ಕೆ ಬರದೆ ಸ್ಪಷ್ಟವಾಗಿ ತಿರಸ್ಕರಿಸುತ್ತಾ ಹೇಳಿದಳು,

‘ಇವತ್ತು ನಿಮ್ಮಿಂದ ಈ ಹಣ ಪಡೆದರೆ, ನಾಳೆಗೇನು ಮಾಡಲಿ? ಈ ಇನ್ನೂರರ ನೋಟು ನನ್ನ ಸಮಸ್ಯೆಯನ್ನು ಬಗೆಹರಿಸಲಾರದು...’

ನೀವು ಶ್ರಮಜೀವಿಗಳು ಎಂಬುದು ನನಗೆ ಗೊತ್ತಿದೆ. ನೀವು ಸ್ವತಃ ಸಂಪಾದಿಸಿ ಜೀವನವನ್ನು ಸಾಗಿಸುತ್ತೀರಿ. ಆದರೆ ನಾನೊಂದು ಮಿಶನ್‌ಗೆ ಹೊರಟಿದ್ದೇನೆ; ನನ್ನ ಮಾರ್ಗದಲ್ಲಿ ಬರುವವರಿಗೆ ಸಹಾಯ ಮಾಡುವುದಾಗಿ ಸಂಕಲ್ಪ ಮಾಡಿದ್ದೇನೆ. ನನ್ನ ಕಡೆಯಿಂದ ಯಾರಿಗೂ ತೊಂದರೆಯಾಗಬಾರದು. ಇದನ್ನು ನಿಮಗಲ್ಲ, ನನಗಾಗಿ ಮಾಡುತ್ತಿದ್ದೇನೆ. ನನಗೆ ದಾನ ಮಾಡುವ ಅವಕಾಶವೊಂದು ಸಿಗುತ್ತಿದೆ.’

ನಾನೆಷ್ಟೇ ಒತ್ತಾಯಿಸಿದರೂ ಮಹಿಳೆ ಹಣವನ್ನು ಮುಟ್ಟಲಿಲ್ಲ. ‘ಒಂದು ವೇಳೆ ಪ್ರತಿಯೊಬ್ಬ ದಾರಿಹೋಕರು ನಿಮ್ಮಂತೆ ಯೋಚಿಸಿದರೆ ಈ ಭೂಮಿ ಸ್ವರ್ಗವಾಗುವುದು’ ಎಂದು ನನ್ನನ್ನು ಆಶೀರ್ವದಿಸಿದಳು.

‘ನೀವು ಈ ನಡುರಾತ್ರಿಯಲ್ಲಿ ಎಲ್ಲಿಗೆ ಹೋಗುತ್ತಿದ್ದೀರಿ?’ ಮಹಿಳೆ ಅಕಸ್ಮಾತ್ ಕೇಳಿದಳು.

‘ತೀರ್ಥಯಾತ್ರೆ ಮಾಡುತ್ತಿದ್ದೇನೆ.’

‘ತೀರ್ಥಯಾತ್ರೆ! ಮುಂದೆ ಯಾವುದಾದರು ದೇವಸ್ಥಾನವಿದೆಯೇ?’ ಅವಳು ಶೂನ್ಯ ರಸ್ತೆಯಲ್ಲಿ ತನ್ನ ದೃಷ್ಟಿ ಹರಿಸುತ್ತಾ ಕೇಳಿದಳು.

‘ಹೌದು, ಭಾರತದ ದೇವಸ್ಥಾನವೊಂದಿದೆ. ನಾಳೆ ಅಲ್ಲಿ ನನ್ನ ಮಾಜಿ ಪತ್ನಿಯ ಮೊದಲ ಪುಣ್ಯತಿಥಿಯ ಧಾರ್ಮಿಕ ಕಾರ್ಯಕ್ರಮವಿದೆ.’

‘ಭಾರತದ ದೇವಸ್ಥಾನ! ಮಾಜಿ ಪತ್ನಿ! ಪುಣ್ಯತಿಥಿ!’ ಮಹಿಳೆ ಆಶ್ಚರ್ಯದಿಂದ ತಡಬಡಿಸಿದಳು.

ನಾನು ಮಹಿಳೆಗೆ ಸಂಕ್ಷಿಪ್ತವಾಗಿ ನನ್ನ ಜೀವನದ ಕಥೆಯನ್ನು ಹೇಳಿದೆ. ಅವಳಿಗೆ ಮತ್ತೂ ಆಶ್ಚರ್ಯವಾಯಿತು.

‘ನೀವು ಬೆಳಿಗ್ಗೆ ನಾಲ್ಕು ಗಂಟೆಯಿಂದ ಪಾದಯಾತ್ರೆಯನ್ನು ಮಾಡುತ್ತಿದ್ದೀರಿ, ಇನ್ನೂ ಮುಂದೆ ಹೋಗಬೇಕೆ?’

‘ಹೌದು, ಇನ್ನೂ ಇಪ್ಪತ್ತೈದು ಕಿ.ಮೀ. ದೂರ ಹೋಗಬೇಕು.’

ಮಹಿಳೆ ಇದ್ದಕ್ಕಿದ್ದಂತೆ ತನ್ನ ಬ್ಯಾಗ್ ತೆರೆದು ಹೇಳಿದಳು, ‘ನೀವು ಇಷ್ಟು ದೂರ ಪಾದಯಾತ್ರೆ ಮಾಡಿರುವಿರಿ... ನಿಮಗೆ ಹಸಿವೆಯಾಗಿರಬೇಕು. ಏನಾದರು ತಿನ್ನಲು ಬೇಕೆ? ಅಲ್ಲಿ ಪಾರ್ಟಿಯಲ್ಲಿ ಸಾಕಷ್ಟು ಭೋಜನ ಉಳಿದಿತ್ತು. ಅವರು ನನಗೆ ಎಲ್ಲವನ್ನೂ ಕೊಟ್ಟರು.’

ಬ್ಯಾಗ್ ತೆರೆದಿದ್ದರಿಂದ ಪಕ್ವಾನ್ನಗಳ ಸುವಾಸನೆ ಗಾಳಿಯಲ್ಲಿ ತೇಲಿ, ನನ್ನ ಮೂಗಿನ ಹೊಳ್ಳೆಗಳನ್ನು ಸಹ ಆವರಿಸಿತು. ಆದರೂ ಹೇಳಿದೆ, ‘ಇದನ್ನು ನೀವು ನಿಮಗೆ ಮತ್ತು ನಿಮ್ಮ ಮಗನಿಗಾಗಿ ತೆಗೆದುಕೊಂಡು ಹೋಗುತ್ತಿದ್ದೀರಿ.’

‘ಸಾಕಷ್ಟು ಆಹಾರವಿದೆ... ನಿಮಗೇನು ಬೇಕು?’ ಎಂದ ಅವಳು, ನನಗೆ ‘ಫ್ರಿಕಾಡೆಲ್ಲರ್ ಇದೆ, ರುಗಬ್ರೆಡ್ ಇದೆ, ಹಾಟ್ ಡಾಗ್ ಇದೆ, ಪೇಸ್ಟ್ರಿ ಇದೆ, ಆಲೂ ಸಲಾಡ್